# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 1) ಶ್ರೀ ರಾಜಮನಿ ಎಸ್.ಡಿ., ನಿವೃತ್ತ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಹಿರೇಬಾದವಾಡಗಿ ಗ್ರಾಮ ಪಂಚಾಯತಿ 2) ಶ್ರೀ ಅಂಜನ್ ಕುಮಾರ್ ಬಿ.ಇ., ಪಂಚಾಯತಿ ಅಭಿವೃದ್ಧಿ ಅಧಿಕಾರಿ ಮತ್ತು 3) ಶ್ರೀ ವೈ.ಎನ್.ಗೌಡರ್, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಬೆಳಗಲ್ಲ ಗ್ರಾಮ ಪಂಚಾಯತಿ, ಹುನಗುಂದ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಇವರುಗಳ ವಿರುದ್ಧ ಲೋಕಾಯುಕ್ತ ಶಿಫಾರಸ್ಸಿನನ್ವಯ ಕ್ರಮ ಜರುಗಿಸುವ ಬಗ್ಗೆ.

ಓದಲಾಗಿದೆ:

1) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 432 ಗ್ರಾಪಂಕಾ 2016, ದಿನಾಂಕ: 14.09.2016.
2) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಆ.ಸ.ಪ.ಸಂ. ಉಪಲೋಕ್-1/ಡಿಇ/543/2016/ಎಆರ್ಇ-10; ದಿನಾಂಕ: 25.10.2017.
3) ಸರ್ಕಾರದ ಸಮಸಂಖ್ಯೆಯ ಎರಡನೇ ಕಾರಣ ಕೇಳಿ ನೋಟೀಸ್, ದಿನಾಂಕ 27.11.2017.
4) 1) ಶ್ರೀ ರಾಜಮನಿ ಎಸ್.ಡಿ., ನಿವೃತ್ತ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಹಿರೇಬಾದವಾಡಗಿ ಗ್ರಾಮ ಪಂಚಾಯತಿ 2) ಶ್ರೀ ಅಂಜನ್ ಕುಮಾರ್ ಬಿ.ಇ., ಪಂಚಾಯತಿ ಅಭಿವೃದ್ಧಿ ಅಧಿಕಾರಿ ಮತ್ತು 3) ಶ್ರೀ ವೈ.ಎನ್.ಗೌಡರ್, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಬೆಳಗಲ್ಲ ಗ್ರಾಮ ಪಂಚಾಯತಿ, ಹುನಗುಂದ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಇವರು ಎರಡನೇ ಕಾರಣ ಕೇಳಿ ನೋಟೀಸ್‌ಗೆ ಸಲ್ಲಿಸಿರುವ ಲಿಖಿತ ಹೇಳಿಕೆ.

ಪ್ರಸ್ತಾವನೆ:

ಮೇಲೆ ಓದಲಾದ (1) ರಲ್ಲಿ, 1) ಶ್ರೀ ರಾಜಮನಿ ಎಸ್.ಡಿ., ನಿವೃತ್ತ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಹಿರೇಬಾದವಾಡಗಿ ಗ್ರಾಮ ಪಂಚಾಯತಿ 2) ಶ್ರೀ ಅಂಜನ್ ಕುಮಾರ್ ಬಿ.ಇ., ಪಂಚಾಯತಿ ಅಭಿವೃದ್ಧಿ ಅಧಿಕಾರಿ ಮತ್ತು 3) ಶ್ರೀ ವೈ.ಎನ್.ಗೌಡರ್, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಬೆಳಗಲ್ಲ ಗ್ರಾಮ ಪಂಚಾಯತಿ, ಹುನಗುಂದ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಇವರುಗಳ ವಿರುದ್ಧ ಕೆಳಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಲು ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲಾಗಿತ್ತು.

"1ನೇ ಆ.ಸ.ನೌಕರರಾದ ಶ್ರೀ. ರಾಜಾಮನಿ ಎಸ್.ಡಿ. ನಿವೃತ್ತ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಹಿರೇಬಾದವಾಡಗಿ ಗ್ರಾ.ಪಂ 2) ಶ್ರೀ. ಅಂಜನ್ ಕುಮಾರ್ ಬಿ.ಇ., ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಬೆಳಗಲ್ಲ ಗ್ರಾ.ಪಂ 3) ಶ್ರೀ. ವೈ.ಎನ್. ಗೌಡರ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಬೆಳಗಲ್ಲ ಗ್ರಾ.ಪಂ ಹುನಗುಂದ ತಾಲ್ಲೂಕು ಬಾಗಲಕೋಟೆ ಜಿಲ್ಲೆ ಆದ ನೀವುಗಳು ಈ ಕೆಳಕಂಡ ನ್ಯೂನತೆಗಳನ್ನು ಮಾಡಿದ್ದೀರಿ.

1. ಕ್ರಿಯಾ ಯೋಜನೆಯಲ್ಲಿನ ಕಾಮಗಾರಿಗಳು ಗ್ರಾಮ ಸಭೆಯಲ್ಲಿ ಆಯ್ಕೆಯಾಗಿರುವುದಿಲ್ಲ.
2. ಕ್ರಿಯಾ ಯೋಜನೆ ಅನುಮೋದನೆ ಪಡೆದಿರುವುದಿಲ್ಲ.
3. ಪ.ಜಾತಿ, ಪ.ಪಂಗಡಗಳ ಶೇ 25 ರಷ್ಟು ಅನುದಾನವನ್ನು ಮಾರ್ಗಸೂಚಿ ಉಲ್ಲಂಘಿಸಿ ದುರುಪಯೋಗಪಡಿಸಿಕೊಳ್ಳಲಾಗಿದೆ.
4. ವಿಕಲಚೇತನರ ಶೇ 3ರ ಅನುದಾನವನ್ನು ಮಾರ್ಗಸೂಚಿ ಉಲ್ಲಂಘಿಸಿ ದುರುಪಯೋಗಪಡಿಸಿಕೊಳ್ಳಲಾಗಿದೆ.
5. ಶಾಶ್ವತ ಕಟ್ಟಡ ನಿರ್ಮಾಣ ಶೇ 90 ರಷ್ಟು ಅನುದಾನ ದುರ್ಬಳಕೆ ಮಾಡಿಕೊಳ್ಳಲಾಗಿದೆ.
6. ಟೆಂಡರ್ ಕರೆದಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

ಆದ್ದರಿಂದ ಆಪಾದಿತ ಸರ್ಕಾರಿ ನೌಕರರು ಬೆಳಗಲ್ಲ ಗ್ರಾಮ ಪಂಚಾಯತಿಯಲ್ಲಿ 2013-14 ಮತ್ತು 2014-15 ಇವುಗಳ ಅವಧಿಯಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಾಗಿ ಕಾರ್ಯ ನಿರ್ವಹಿಸಿದಾಗ ಅಭಿವೃದ್ಧಿ ಹಣವನ್ನು ದುರುಪಯೋಗಪಡಿಸಿಕೊಂಡು ಸರ್ಕಾರಕ್ಕೆ ನಷ್ಟ ಉಂಟುಮಾಡಿ ಕರ್ತವ್ಯ ಲೋಪವೆಸಗಿರುತ್ತೀರಿ. ತನಿಖಾಧಿಕಾರಿಗಳು ದಾಖಲೆಗಳ ಸಮೇತ ಅಂಕಿ ಅಂಶಗಳನ್ನು ನೀಡಿದ್ದು ಅವುಗಳು ವಾಸ್ತವಿಕವಾಗಿರುತ್ತವೆ ಅಂತ ಕಂಡು ಬರುತ್ತದೆ. ಆದ್ದರಿಂದ ಆ.ಸ.ನೌಕರರಾದ ನೀವು ಸರ್ಕಾರಿ ನೌಕರರಾಗಿ ಕರ್ತವ್ಯ ಲೋಪವೆಸಗಿರುತ್ತೀರಿ.

ಆದಕಾರಣ ಆಪಾದಿತ ಸರ್ಕಾರಿ ನೌಕರರಾದ ನೀವು ಸರ್ಕಾರಿ ಸೇವಕರಾಗಿದ್ದು, ನಿಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ ಸ್ವಂತ ಲಾಭಕ್ಕಾಗಿ ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದು, ಆಪಾದಿತ ಸರ್ಕಾರಿ ನೌಕರರಾದ ನೀವು ಕರ್ನಾಟಕ ಸೇವಾ (ನಡತೆ) ನಿಯಮಾವಳಿ 1966ರ ನಿಯಮ 3(1) ನೇ ನಿಬಂಧನೆಯನ್ನು ಉಲ್ಲಂಘಿಸಿ ದುರ್ನಡತೆ ಎಸಗಿದ್ದೀರಿ."

.....2

ಮೇಲೆ ಓದಲಾದ (2) ರಲ್ಲಿ, ತನಿಖಾಧಿಕಾರಿಗಳಾದ ಅಪರ ನಿಬಂಧಕರು, ವಿಚಾರಣೆಗಳು-10, ಕರ್ನಾಟಕ ಲೋಕಾಯುಕ್ತ ಇವರು ಪ್ರಕರಣದ ಬಗ್ಗೆ ವಿಚಾರಣೆ ನಡೆಸಿ ವರದಿ ಸಲ್ಲಿಸಿದ್ದು, ಆರೋಪಗಳು ಸಾಬೀತಾಗಿರುವ ಹಿನ್ನೆಲೆಯಲ್ಲಿ ಮಾನ್ಯ ಉಪಲೋಕಾಯುಕ್ತರು ದಿನಾಂಕ: 25.10.2017 ರ ವರದಿಯಲ್ಲಿ ಶ್ರೀ ರಾಜಮನಿ ಎಸ್.ಡಿ., ನಿವೃತ್ತ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಹಿರೇಬಾದವಾಡಗಿ ಗ್ರಾಮ ಪಂಚಾಯಿತಿ ಇವರಿಗೆ ಪಾವತಿಸಲಾಗುವ ಪಿಂಚಣಿಯಲ್ಲಿ ರೂ.1,16,275/- ಗಳನ್ನು (ಸದರಿಯವರಿಂದ ಉಂಟಾಗಿರುವ ಆರ್ಥಿಕ ನಷ್ಟ) ವಸೂಲಿ ಮಾಡುವ, ಶ್ರೀ ಅಂಜನ್ ಕುಮಾರ್ ಬಿ.ಇ., ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಬೆಳಗಲ್ಲ ಗ್ರಾಮ ಪಂಚಾಯಿತಿ ಇವರ ನಾಲ್ಕು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮ ಸಹಿತವಾಗಿ ತಡೆಹಿಡಿಯುವ ಹಾಗೂ ರೂ.4,20,933/- ಗಳನ್ನು (ಸದರಿಯವರಿಂದ ಉಂಟಾಗಿರುವ ಆರ್ಥಿಕ ನಷ್ಟ) ಸದರಿ ನೌಕರರ ವೇತನ ಹಾಗೂ ಭತ್ಯೆಗಳಿಂದ ವಸೂಲಿ ಮಾಡುವ ಮತ್ತು ಶ್ರೀ ವೈ.ಎನ್.ಗೌಡರ್, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಬೆಳಗಲ್ಲ ಗ್ರಾಮ ಪಂಚಾಯಿತಿ ಇವರ ನಾಲ್ಕು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮ ಸಹಿತವಾಗಿ ತಡೆಹಿಡಿಯುವ ಹಾಗೂ ರೂ.2,88,143/- ಗಳನ್ನು (ಸದರಿಯವರಿಂದ ಉಂಟಾಗಿರುವ ಆರ್ಥಿಕ ನಷ್ಟ) ಸದರಿ ನೌಕರರ ವೇತನ ಹಾಗೂ ಭತ್ಯೆಗಳಿಂದ ವಸೂಲಿ ಮಾಡುವ ದಂಡನೆಯನ್ನು ವಿಧಿಸಲು ಶಿಫಾರಸ್ಸು ಮಾಡಿರುತ್ತಾರೆ.

ಮೇಲೆ ಓದಲಾದ (3) ರಲ್ಲಿ ಪ್ರಕರಣದ ಸಂಬಂಧ ಮಾನ್ಯ ಉಪಲೋಕಾಯುಕ್ತರು ದಂಡನೆ ವಿಧಿಸಲು ಶಿಫಾರಸ್ಸು ಮಾಡಿರುವ ಹಿನ್ನೆಲೆಯಲ್ಲಿ ಆಕ್ಷೇಪಣೆಗಳನ್ನು ಆಹ್ವಾನಿಸಿ ಸದರಿ ನೌಕರರಿಗೆ ಎರಡನೇ ಕಾರಣ ಕೇಳುವ ನೋಟೀಸನ್ನು ಜಾರಿ ಮಾಡಲಾಗಿತ್ತು.

ಮೇಲೆ ಓದಲಾದ (4) ರಲ್ಲಿ ಆರೋಪಿತ ನೌಕರರು ಎರಡನೇ ಕಾರಣ ಕೇಳುವ ನೋಟೀಸಿಗೆ ಕೆಳಗಿನಂತೆ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ.

1) **ಶ್ರೀ ರಾಜಮನಿ ಎಸ್.ಡಿ., ನಿವೃತ್ತ ಪಂಚಾಯತಿ ಅಭಿವೃದ್ಧಿ ಅಧಿಕಾರಿ**

1. ಕ್ರಿಯಾ ಯೋಜನೆ ಕಾಮಗಾರಿಗಳು ಗ್ರಾಮ ಸಭೆಯಲ್ಲಿ ಆಯ್ಕೆಯಾಗಿರುವುದಿಲ್ಲ ಎಂದು ಆರೋಪಿಸಲಾಗಿದೆ. 2012-13ನೇ ಸಾಲಿನ ಕಾಮಗಾರಿಗಳನ್ನು ಗ್ರಾಮ ಸಭೆಯಲ್ಲಿ ಆಯ್ಕೆ ಮಾಡಲಾಗಿದೆ. 2013-14ನೇ ಸಾಲಿನ ಕ್ರಿಯಾ ಯೋಜನೆ ವಿಶೇಷ ಗ್ರಾಮ ಸಭೆ ಪ್ರಕ್ರಿಯೆ ಮುಗಿಸಿರುತ್ತೇನೆ. ಈ ಬಗ್ಗೆ ಮುಂದಿನ ಪಿ.ಡಿ.ಓ ಗಳ ಜವಾಬ್ದಾರಿಯಾಗಿರುತ್ತದೆ. ಈ ವಿಷಯ ನನ್ನ ಅವಧಿಗೆ ಬರುವುದಿಲ್ಲ.
2. ಕ್ರಿಯಾಯೋಜನೆ ಅನುಮೋದನೆಗೊಂಡಿರುವುದಿಲ್ಲ ಎಂದು ಆರೋಪಿಸಲಾಗಿದೆ. 2013-14ನೇ ಸಾಲಿನ ಕ್ರಿಯಾ ಯೋಜನೆಯನ್ನು ನಾನು ಸಿದ್ಧಪಡಿಸಿರುವುದಿಲ್ಲ. ಸದರಿ ಸಾಲಿನ ಕಾಮಗಾರಿಗಳನ್ನಾಗಲಿ ಇನ್ನಿತರ ಯೋಜನೆ ಹಣ ಖರ್ಚು ಭರಿಸಲಿಲ್ಲ. ಇದು ನನ್ನ ಅವಧಿಗೆ ಸಂಬಂಧಿಸಿದ ವಿಷಯವಾಗಿಲ್ಲ.
3. ಪ.ಜಾ., ಪ.ಪಂ ಹಣ ಅನುದಾನ ಮಾರ್ಗಸೂಚಿ ಉಲ್ಲಂಘಿಸಿ ದುರುಪಯೋಗಪಡಿಸಿದ್ದು ಆರೋಪಿಸಲಾಗಿದೆ. ಸದರಿ ಯೋಜನೆಗೆ ಮೀಸಲಿಟ್ಟ ಹಣ ನಾನು ನನ್ನ ಸೀಮಿತ ಅವಧಿಯಲ್ಲಿ ಖರ್ಚು ಭರಿಸಿರುವುದಿಲ್ಲ. ಕಾರಣ ಈ ವಿಷಯ ನನ್ನ ಅವಧಿಗೆ ಬರುವುದಿಲ್ಲ.
4. ವಿಕಲಚೇತನ ಶೇ 3 ಹಣ ಅನುದಾನ ಮಾರ್ಗಸೂಚಿ ಉಲ್ಲಂಘಿಸಿ ದುರುಪಯೋಗಪಡಿಸಿದ್ದು ಆರೋಪಿಸಲಾಗಿದೆ. ಸದರಿ ಯೋಜನೆಗೆ ಮೀಸಲಿಟ್ಟ ಹಣ ನಾನು ನನ್ನ ಸೀಮಿತ ಅವಧಿಯಲ್ಲಿ ಖರ್ಚು ಭರಿಸಿರುವುದಿಲ್ಲ. ಕಾರಣ ಈ ವಿಷಯ ನನ್ನ ಅವಧಿಗೆ ಬರುವುದಿಲ್ಲ.
5. ಶಾಶ್ವತ ಕಟ್ಟಡ ನಿರ್ಮಾಣ ಶೆ 90 ಹಣ ದುರುಪಯೋಪಡಿಸಿಕೊಳ್ಳಲಾಗಿದೆ ಎಂದು ಆರೋಪಿಸಲಾಗಿದೆ. ನನ್ನ ಅವಧಿಯಲ್ಲಿ ಯಾವುದೇ ಕಟ್ಟಡ ನಿರ್ಮಾಣ ಕಾಮಗಾರಿಗಳನ್ನು ನಿರ್ವಹಿಸಿರುವುದಿಲ್ಲ. ಕಾರಣ ಈ ವಿಷಯ ನನ್ನ ಅವಧಿಗೆ ಬರುವುದಿಲ್ಲ.
6. ಟೆಂಡರ್ ಕರೆದಿರುವ ಬಗ್ಗೆ ದಾಖಲೆ ಹಾಜರುಪಡಿಸಿಲ್ಲವೆಂದು ಆರೋಪಿಸಲಾಗಿದೆ. ತಾಲ್ಲೂಕು ಯೋಜನಾಧಿಕಾರಿಗಳು ಸ್ಥಾನಿಕ ಚೌಕಾಶಿಗೆ ಹೋದಾಗ ನಾನು ಸೇವಾ ನಿವೃತ್ತಿ ಹೊಂದಿರುತ್ತೇನೆ. ನನ್ನ ಅವಧಿಯಲ್ಲಿ ಯಾವುದೇ ಕಾಮಗಾರಿಗಳನ್ನು ಮಾಡಿರುವುದಿಲ್ಲ.
7. ನನ್ನ ಅವಧಿಯಲ್ಲಿ ರೂ 1,16,275/- ಗಳನ್ನು ದುರುಪಯೋಗಪಡಿಸಿಕೊಳ್ಳಲಾಗಿದೆ ಎಂದು ಆರೋಪಿಸಲಾಗಿದೆ. ಸದರಿ ಹಣವನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಹಾಗೂ ತುರ್ತುಸೇವೆಗಳಿಗಾಗಿ 13ನೇ ಹಣಕಾಸು ಯೋಜನೆ ಖಾತೆ 2012-13ನೇ ಸಾಲಿನ ಶಿಲ್ಕು ಹಣವನ್ನು ಖರ್ಚು ಮಾಡಿದ್ದು ಇರುತ್ತದೆ. ಕುಡಿಯುವ ನೀರಿನ ಪಂಪು ರಿಪೇರಿ ಹಾಗೂ ಹ್ಯಾಂಡ್ ಪಂಪು ಸಾಮಗ್ರಿಗಳನ್ನು ಹಾಗೂ ಬೀದಿ ದೀಪ

......3

ಸಲುವಾಗಿ ಹಾಗೂ ಅವಶ್ಯಕ ಸೇವೆಗಳಿಗಾಗಿ ಖರ್ಚು ಭರಿಸಿದ್ದು ಇರುತ್ತದೆ. ಸದರಿ ಸಾಮಗ್ರಿಗಳನ್ನು ಖರೀದಿಸುವ ಪೂರ್ವದಲ್ಲಿ ಗ್ರಾಮ ಪಂಚಾಯಿತಿಯ ಸಾಮಾನ್ಯ ಸಭೆಯಲ್ಲಿ ಅನುಮೋದನೆ ಪಡೆದು ನಿಯಮಾನುಸಾರ ದರಪಟ್ಟಿ ಕರೆದು ಕಡಿಮೆ ದರ ಪಟ್ಟಿಗೆ ಖರೀದಿಸಿದೆ. ಇದರಲ್ಲಿ ಪ.ಜಾ.ಪ.ಪಂ ಹಾಗೂ ವಿಕಲಚೇತನರಿಗೆ ಮೀಸಲಿಟ್ಟ ಹಣವಿರುವುದಿಲ್ಲ. ಸದರಿ ಖರ್ಚಿನ ಬಗ್ಗೆ ದರಪಟ್ಟಿ ಇನ್ನಿತರ ದಾಖಲಾತಿ ಬಿಲ್ಲು ಸಮೇತ ಹಾಜರುಪಡಿಸಲಾಗಿದ್ದು, ದೋಷಾರೋಪದಿಂದ ಮುಕ್ತಗೊಳಿಸಲು ಕೋರಿರುತ್ತಾರೆ.

2) <u>ಶ್ರೀ ವೈ.ಎನ್.ಗೌಡರ್, ಪಂಚಾಯತಿ ಅಭಿವೃದ್ಧಿ ಅಧಿಕಾರಿ</u>

1. ಗ್ರಾಮಸಭೆಯನ್ನು ದಿನಾಂಕ:26-05-2014ರಂದು ಜರುಗಿಸಲಾಗಿದೆ. ಗ್ರಾಮ ಸಭೆಯಲ್ಲಿ ತುರ್ತು ಕುಡಿಯುವ ನೀರಿನ ಬಗ್ಗೆ ಹ್ಯಾಂಡ್ ಪಂಪ್ ರಿಪೇರಿ ಬೀದಿ ದೀಪ ಸಾಮಗ್ರಿ ಖರೀದಿ ಶೇ 25 ಹಣದಲ್ಲಿ ಪ.ಜಾ, ಪ.ಪಂ. ಬೀದಿಗಳಲ್ಲಿ ರಸ್ತೆ ಸುಧಾರಣೆಗೆ ಹಾಗೂ ವಿಕಲಚೇತನರಿಗಾಗಿ ರಾಟಿ ಖರೀದಿ ಕಾಮಗಾರಿ ಚರ್ಚಿಸಿ ಅನುಮೋದನೆ ಪಡೆಯಲಾಗಿದೆ ಹಾಗೂ ದಿನಾಂಕ:10.06.2014 ರ ಸಾಮಾನ್ಯ ಸಭೆಯಲ್ಲಿ ಅನುಮೋದನೆ ಪಡೆಯಲಾಗಿದೆ.
2. 2013-14 ಹಾಗೂ 2014-15 ಸಾದರಪಡಿಸದ ಕ್ರಿಯಾಯೋಜನೆ ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ಅನುಮೋದನೆಯಾಗಿರುತ್ತದೆ. ತಪ್ಪು ಮಾಹಿತಿ ಮೂಲಕ ದೋಷಾರೋಪ ಮಾಡಿದ್ದು ಅಲ್ಲಗಳೆಯಲಾಗಿದೆ.
3. ಪ.ಜಾತಿ ಪ.ಪಂಗಡಗಳ ಶೇ 25ರ ಯೋಜನೆಯಲ್ಲಿ ಮಾರ್ಗಸೂಚಿ ಪ್ರಕಾರ ಬೆಳಗಲ್ಲ ಗ್ರಾಮ ಪಂಚಾಯಿತಿಯ ನಂದನೂರು ಗ್ರಾಮದ ಎಸ್.ಸಿ ಕಾಲೋನಿಯಲ್ಲಿ ರಸ್ತೆ ನಿರ್ಮಾಣ ಕಾಮಗಾರಿಗೆ ಶೇ.1.350 ಲಕ್ಷ ಅನುದಾನ ಮೀಸಲಿಡಿಸಿದ್ದು ಕಾಮಗಾರಿ ಅನುಷ್ಠಾನಗೊಳಿಸಿರುವುದಿಲ್ಲ. ಕಾಮಗಾರಿಗೆ ಖರ್ಚು ಮಾಡಿಲ್ಲ. ಅನುದಾನ ಗ್ರಾಮ ಪಂಚಾಯಿತಿಯಲ್ಲಿ ಉಳಿದಿರುತ್ತದೆ.
4. ವಿಕಲಚೇತನರ ಶೇ 3 ರ ಯೋಜನೆಯಲ್ಲಿ ಮಾರ್ಗಸೂಚಿ ಪ್ರಕಾರ ಶೇ 3 ರಷ್ಟು ಅನುದಾನ ರೂ 27700 ಮೀಸಲಿರಿಸಿದ್ದು ರೂ. 22700 ಖರ್ಚು ಭರಿಸಿದೆ. ಸದರಿ ಹಣವನ್ನು ಶ್ರೀ ಬೋಜಪ್ಪ ಯಲ್ಲಪ್ಪ ಕೆರೂರ ಸಾ ನಂದನೂರ ರವರ ಅನಾರೋಗ್ಯದ ನಿಮಿತ್ತ ವೈದ್ಯಕೀಯ ವೆಚ್ಚ ಭರಿಸಲಾಗಿದೆ.
5. ಸಿವಿಲ್ ಕಟ್ಟಡ ಕಾಮಗಾರಿ ಅನುಷ್ಠಾನಗೊಳಿಸಿರುವುದಿಲ್ಲ. ಕಾರಣ ಟೆಂಡರ್ ಕರೆಯುವ ಪ್ರಕ್ರಿಯೆ ವೃದ್ಧಿಗೊಳಿಸಿರುವುದಿಲ್ಲ.
6. ಕ್ರಿಯಾಯೋಜನೆಯಲ್ಲಿ ಅಳವಡಿಸಿದ ಪ್ರಕಾರ ಸಾರ್ವಜನಿಕರ ಅಗತ್ಯ ಅವಶ್ಯಕತೆಯ ತುರ್ತು ಸೇವೆಗಾಗಿ ಕುಡಿಯುವ ನೀರಿನ ಸಾಮಗ್ರಿ ಹಾಗೂ ಬೀದಿದೀಪ ಕಾಲಕಾಲಕ್ಕೆ ಖರೀದಿಸಲಾಗಿದೆ. ಖರೀದಿ ಪೂರ್ವದಲ್ಲಿ ದರಪಟ್ಟಿ ಕರೆದು ಕಡಿಮೆ ಬೆಲೆಯ ದರಪಟ್ಟಿಗೆ ಸಾಮಗ್ರಿ ಖರೀದಿಸಲಾಗಿದೆ. ಆದ್ದರಿಂದ ನ್ಯಾಯ ದೊರಕಿಸಿಕೊಡಲು ಕೋರಿರುತ್ತಾರೆ.

3) <u>ಶ್ರೀ ಅಂಜನ್ ಕುಮಾರ್ ಬಿ.ಇ, ಪಂಚಾಯತಿ ಅಭಿವೃದ್ಧಿ ಅಧಿಕಾರಿ</u>

ಮಾನ್ಯ ಲೋಕಾಯುಕ್ತರು, ಚಿಕ್ಕಬಳ್ಳಾಪುರ, ಲೋಕಾಯುಕ್ತ ಪೊಲೀಸ್ ಮುಖಾಂತರ ಅನುಬಂಧ-1 ರಿಂದ 4 ರವರೆಗಿನ ದೋಷಾರೋಪಣಾಪಟ್ಟಿಯನ್ನು ದಿ:13.07.2017 ರಂದು ಜಾರಿ ಮಾಡಿದ್ದು ವಿಚಾರಣೆಗೆ ಯಾವ ದಿನಾಂಕದಂದು ಹಾಜರಾಗಬೇಕೆಂದು ತಿಳಿಸಿರುವುದಿಲ್ಲ. ಕಾರ್ಯನಿರ್ವಾಹಕಾಧಿಕಾರಿಗಳು ದಿ: 04.12.2013 ರಂದು ಪ್ರಭಾರ ಪಡೆದುಕೊಳ್ಳಲು ಆದೇಶ ನೀಡಿದ್ದರೂ ದಿ:20.05.2014 ರವರೆಗೂ ಪಂಚಾಯ್ತಿ ಕಾರ್ಯದರ್ಶಿ ಪ್ರಭಾರ ನೀಡಲು ವಿಳಂಬ ಮಾಡಿದ್ದರು. ದಿ:20.05.2014 ರಂದು ಚಾರ್ಜ್ ಪಡೆದು ದಿ:17.09.2014 ರಂದು ಪುನಃ ಪ್ರಭಾರವನ್ನು ಬೇರೆಯವರಿಗೆ ವಹಿಸಿಕೊಟ್ಟಿರುತ್ತೇನೆ.

ನನ್ನ ಅವಧಿಯಲ್ಲಿ ದಿ:26.05.2014 ಮತ್ತು ದಿ:10.06.2014 ರಂದು ಎರಡು ಬಾರಿ ಸಭೆಗಳನ್ನು ನಡೆಸಿರುತ್ತೇನೆ.

ಅನುಬಂಧ-1 ರಿಂದ 4 ರವರೆಗಿನ ದೋಷಾರೋಪಣಾಪಟ್ಟಿಯನ್ನು ಮಾತ್ರ ಜಾರಿ ಮಾಡಿದ್ದು, ವಿಚಾರಣೆಗೆ ಹಾಜರಾಗಲು ಲೋಕಾಯುಕ್ತ ಕಛೇರಿಯಿಂದ ಯಾವುದೇ ನೋಟಿಸ್ ಬಂದಿರುವುದಿಲ್ಲ. ಕೆ.ಸಿ.ಎಸ್.ಆರ್ ನಿಯಮ-28(ಎ) ರಲ್ಲಿನ ಯಾವುದೇ ವಿಧಿವಿಧಾನಗಳನ್ನು ಅನುಸರಿಸಿರುವುದಿಲ್ಲ. ಆರೋಪಪಟ್ಟಿಯನ್ನು ರವಾನಿಸುವುದು ಮಾತ್ರ ಸಾಕಾಗುವುದಿಲ್ಲ. ಅದನ್ನು ವಾಸ್ತವವಾಗಿ ವಿಚಾರಣೆ ಪ್ರಾರಂಭವಾಗುವುದಕ್ಕಿಂತ ಮೊದಲು ಆರೋಪಿತ ಮೇಲೆ ಜಾರಿ ಮಾಡುವುದು ಅವಶ್ಯಕವಾಗಿರುತ್ತದೆಂದು (ಭಾರತ ಒಕ್ಕೂಟ ವಿರುದ್ಧ ದೀನನಾಥ ಶಾಂತರಾಮ ಕಾಶೀಕರ್ ಎ.ಐ.ಆರ್ 1998 ಎಸ್‌ಸಿ-2722) ರ ಪ್ರಕರಣದಲ್ಲಿ ತಿಳಿಸಿದೆ.

......4

ಭಾರತ ಸಂವಿಧಾನದ ಅನುಚ್ಛೇದ 311 ರ ಪ್ರಕಾರ ವಿಚಾರಣೆಯನ್ನು ನಡೆಸದೆ ಆರೋಪಗಳ ವಿರುದ್ಧ ಅವನನ್ನು ಆಲಿಸಲು ಯುಕ್ತ ಅವಕಾಶ ನೀಡದ ಹೊರತು ದಂಡನೆಗಳನ್ನು ವಿಧಿಸುವಂತಿಲ್ಲವೆಂದು ತಿಳಿಸಿದೆ. ಆದ್ದರಿಂದ ಪ್ರಕರಣಕ್ಕೆ ಸಂಬಂಧಿಸಿದಂತೆ ಮರುವಿಚಾರಣೆಗೆ ಅವಕಾಶ ನೀಡಬೇಕೆಂದು ಕೋರಿರುತ್ತಾರೆ.

ಶ್ರೀ ರಾಜಮನಿ ಎಸ್.ಡಿ., ನಿವೃತ್ತ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಹಿರೇಬಾದವಾಡಗಿ ಗ್ರಾಮ ಪಂಚಾಯತಿ, ಶ್ರೀ ಅಂಜನ್ ಕುಮಾರ್ ಬಿ.ಇ. ಮತ್ತು ಶ್ರೀ ವೈ.ಎನ್.ಗೌಡರ್, ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಬೆಳಗಲ್ಲ ಗ್ರಾಮ ಪಂಚಾಯತಿ, ಹುನಗುಂದ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಇವರುಗಳು ಎರಡನೇ ಕಾರಣ ಕೇಳುವ ನೋಟೀಸಿಗೆ ನೀಡಿರುವ ಉತ್ತರವನ್ನು ವಿಚಾರಣಾ ವರದಿಯಲ್ಲಿನ ಅಂಶಗಳ ಹಿನ್ನೆಲೆಯಲ್ಲಿ ಪರಿಶೀಲಿಸಲಾಯಿತು. ಸದರಿಯವರು ಎತ್ತಿರುವ ಆಕ್ಷೇಪಣೆಗಳಿಗೆ ಸಂಬಂಧಿಸಿದಂತೆ ವಿಚಾರಣಾ ವರದಿಯಲ್ಲಿ ವಿವರವಾದ ಸಮರ್ಥನೆಗಳನ್ನು ನೀಡಲಾಗಿದೆ. ಸದರಿ ವಿಚಾರಣಾ ವರದಿಯ ಪ್ರಮುಖ ಅಂಶಗಳನ್ನು ಈ ಕೆಳಕಂಡಂತೆ ಪುನರುಚ್ಛರಿಸಿದೆ:-

"26. Further PW2 has deposed that in the total grants DGOs had to spent minimum 25% of grants towards Scheduled caste and Scheduled tribes and 3% to physically challenged persons. But no money was spent to scheduled caste and scheduled tribe and physically challenged persons. Thereby DGOs have misappropriated this amount. Out of the total grant, 90% had to be spent towards permanent structures. DGOs have not taken comparative statements, quotations, tenders were not called and violated the guidelines.

27. Further PW2 has deposed that DGO no.1 is the responsible PDO for the loss of Rs. 1,16,275/-. DGO no.2 is the responsible officer for the loss of Rs. 14,07,180/-. DGO no.3 is the responsible officer for loss of Rs. 12,68,953/-. Accordingly, he has submitted his report Ex.P.4 to Executive officer, hungund. He has also submitted copy of action plan Ex.P.5 and bills Ex.P.6.

28. The evidence of PWs 1 and 2 remained unchallenged. Inspite of service of notice, DGOs 1 to 3 remained absent. This attitude of DGOs 1 to 3 strengthens the contention of Disciplinary Authority.

29. The oral and the documentary evidence on record clearly shows that during the year 2013-14, the total grant released was Rs. 18,35,538/-. The works in the action plan were not selected in gramsabha. The action plan was not approved, 25% of grants were not reserved for SC/ST, 3% grants were not reserved for physically challenged persons. 90% of the amount reserved for permanent structures was misused. Tender documents were not produced.

Thereby the DGOs 1 to 3, being Government/Public Servants have failed to maintain absolute integrity besides devotion to duty and acted in a manner unbecoming of the Government servants. Hence, I proceed to answer Point No.1 in the affirmative."

ಸರ್ಕಾರವು ಪರಿಶೀಲಿಸಿ, ಈ ಹಿನ್ನೆಲೆಯಲ್ಲಿ, ಆಪಾದಿತರು ಎರಡನೇ ಕಾರಣ ಕೇಳುವ ನೋಟೀಸಿಗೆ ನೀಡಿರುವ ಉತ್ತರವನ್ನು ಅಂಗೀಕರಿಸಲು ಬರುವುದಿಲ್ಲ ಮತ್ತು ವಿಚಾರಣಾ ವರದಿ ಹಾಗೂ ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸನ್ನು ಒಪ್ಪುವುದು ಸಮಂಜಸವೆಂದು ಕಂಡು ಬರುತ್ತದೆ. ಆದುದರಿಂದ ವಿಚಾರಣಾ ವರದಿ ಹಾಗೂ ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸನ್ನು ಅಂಗೀಕರಿಸಿ, ಶ್ರೀ ರಾಜಮನಿ ಎಸ್.ಡಿ., ನಿವೃತ್ತ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಹಿರೇಬಾದವಾಡಗಿ ಗ್ರಾಮ ಪಂಚಾಯಿತಿ ಇವರಿಗೆ ಪಾವತಿಸಲಾಗುವ ಪಿಂಚಣಿಯಲ್ಲಿ ರೂ.1,16,275/- ಗಳನ್ನು ವಸೂಲಿ ಮಾಡುವ, ಶ್ರೀ ಅಂಜನ್ ಕುಮಾರ್ ಬಿ.ಇ., ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಬೆಳಗಲ್ಲ ಗ್ರಾಮ ಪಂಚಾಯತಿ ಇವರಿಗೆ ನಾಲ್ಕು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮ ಸಹಿತವಾಗಿ ತಡೆಹಿಡಿಯುವ ಹಾಗೂ ರೂ.4,20,933/- ಗಳನ್ನು ಸದರಿ ನೌಕರರ ವೇತನ ಹಾಗೂ ಭತ್ಯೆಗಳಿಂದ ವಸೂಲಿ ಮಾಡುವ ಮತ್ತು ಶ್ರೀ ವೈ.ಎನ್.ಗೌಡರ್, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಬೆಳಗಲ್ಲ ಗ್ರಾಮ ಪಂಚಾಯಿತಿ ಇವರಿಗೆ ನಾಲ್ಕು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮ ಸಹಿತವಾಗಿ ತಡೆಹಿಡಿಯುವ ಹಾಗೂ ರೂ.2,88,143/- ಗಳನ್ನು ಸದರಿ ನೌಕರರ ವೇತನ ಹಾಗೂ ಭತ್ಯೆಗಳಿಂದ ವಸೂಲಿ ಮಾಡುವ ದಂಡನೆಗಳನ್ನು ವಿಧಿಸಲು ಸರ್ಕಾರವು ನಿರ್ಧರಿಸಿದೆ. ಅದರಂತೆ ಈ ಆದೇಶ.

......5

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 432 ಗ್ರಾಪಂಕಾ 2017, ಬೆಂಗಳೂರು, ದಿನಾಂಕ: 11.07.2018**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸರ್ಕಾರಿ ಸೇವಾ (ನಡತೆ) ನಿಯಮಾವಳಿ 1966ರ ನಿಯಮ 3(1) ನೇ ನಿಬಂಧನೆಯನ್ನು ಉಲ್ಲಂಘಿಸಿ ದುರ್ನಡತೆ ಎಸಗಿರುವ ಹಿನ್ನೆಲೆಯಲ್ಲಿ, ಮಾನ್ಯ ಉಪಲೋಕಾಯುಕ್ತರ ವರದಿಯಲ್ಲಿನ ಶಿಫಾರಸ್ಸಿನನ್ವಯ ಪ್ರಕರಣದಲ್ಲಿ ಭಾಗಿಯಾಗಿರುವ ನೌಕರರುಗಳಿಗೆ ಕೆಳಗಿನಂತೆ ದಂಡನೆಗಳನ್ನು ವಿಧಿಸಿ ಆದೇಶಿಸಿದೆ.

1) ಕರ್ನಾಟಕ ನಾಗರೀಕ ಸೇವಾ ನಿಯಮಗಳು, 1957 ರ ನಿಯಮ 214(1)(ಬಿ) ರನ್ವಯ ಶ್ರೀ ರಾಜಮನಿ ಎಸ್.ಡಿ., ನಿವೃತ್ತ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಹಿರೇಬಾದವಾಡಗಿ ಗ್ರಾಮ ಪಂಚಾಯಿತಿ, ಹುನಗುಂದ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಇವರಿಗೆ ಪಾವತಿಸಲಾಗುವ ಪಿಂಚಣಿಯಲ್ಲಿ ರೂ.1,16,275/- ಗಳನ್ನು ವಸೂಲಿ ಮಾಡುವುದು.

2) ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 8(iii) ಮತ್ತು (iv) ಅಡಿಯಲ್ಲಿ ನಿರ್ದಿಷ್ಟಪಡಿಸಿದಂತೆ ಶ್ರೀ ಅಂಜನ್ ಕುಮಾರ್ ಬಿ.ಇ., ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಬೆಳಗಲ್ಲ ಗ್ರಾಮ ಪಂಚಾಯಿತಿ, ಹುನಗುಂದ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಇವರ ನಾಲ್ಕು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮ ಸಹಿತವಾಗಿ ತಡೆಹಿಡಿಯುವ ಹಾಗೂ ರೂ.4,20,933/- ಗಳನ್ನು ಸದರಿ ನೌಕರರ ವೇತನ ಹಾಗೂ ಭತ್ಯೆಗಳಿಂದ ವಸೂಲಿ ಮಾಡುವುದು.

3) ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 8(iii) ಮತ್ತು (iv) ಅಡಿಯಲ್ಲಿ ನಿರ್ದಿಷ್ಟಪಡಿಸಿದಂತೆ ಶ್ರೀ ವೈ.ಎನ್.ಗೌಡರ್, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಬೆಳಗಲ್ಲ ಗ್ರಾಮ ಪಂಚಾಯಿತಿ, ಹುನಗುಂದ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಇವರ ನಾಲ್ಕು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮ ಸಹಿತವಾಗಿ ತಡೆಹಿಡಿಯುವ ಹಾಗೂ ರೂ.2,88,143/- ಗಳನ್ನು ಸದರಿ ನೌಕರರ ವೇತನ ಹಾಗೂ ಭತ್ಯೆಗಳಿಂದ ವಸೂಲಿ ಮಾಡುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

11/7

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ,

1) ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2) ಮಾನ್ಯ ಉಪಲೋಕಾಯುಕ್ತರವರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
4) ಅಪರ ನಿಬಂಧಕರು, ವಿಚಾರಣೆಗಳು-10, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
5) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಬಾಗಲಕೋಟೆ ಜಿಲ್ಲಾ ಪಂಚಾಯತಿ, ಬಾಗಲಕೋಟೆ.
6) ಕಾರ್ಯನಿರ್ವಾಹಕ ಅಧಿಕಾರಿ, ಹುನಗುಂದ ತಾಲ್ಲೂಕು ಪಂಚಾಯತಿ, ಹುನಗುಂದ, ಬಾಗಲಕೋಟೆ ಜಿಲ್ಲೆ. (ಸಂಬಂಧಿಸಿದ ನೌಕರರಿಗೆ ಆದೇಶದ ಪ್ರತಿಯನ್ನು ತಲುಪಿಸಿ, ಸರ್ಕಾರಕ್ಕೆ ಸ್ವೀಕೃತಿ ಸಲ್ಲಿಸುವಂತೆ ಕೋರಿದೆ.)
7) ಶ್ರೀ ರಾಜಮನಿ ಎಸ್.ಡಿ., ನಿವೃತ್ತ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಹಿರೇಬಾದವಾಡಗಿ ಗ್ರಾಮ ಪಂಚಾಯತಿ, ಹುನಗುಂದ ತಾಲ್ಲೂಕು, ಬಾಗಲಕೋಟೆ ಜಿಲ್ಲೆ.
8) ಶ್ರೀ ಅಂಜನ್ ಕುಮಾರ್ ಬಿ.ಇ., ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಬೆಳಗಲ್ಲ ಗ್ರಾಮ ಪಂಚಾಯತಿ, ಹುನಗುಂದ ತಾಲ್ಲೂಕು, ಬಾಗಲಕೋಟೆ ಜಿಲ್ಲೆ.
9) ಶ್ರೀ ವೈ.ಎನ್.ಗೌಡರ್, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಬೆಳಗಲ್ಲ ಗ್ರಾಮ ಪಂಚಾಯತಿ, ಹುನಗುಂದ ತಾಲ್ಲೂಕು, ಬಾಗಲಕೋಟೆ ಜಿಲ್ಲೆ.
10) ಗಣಕಕೋಶ, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ. – ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
11) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.